# ರಾಷ್ಟ್ರೀಯ ಭದ್ರತೆ ವಿಚಾರಗಳನ್ನು
# ಸ್ಥಳೀಯ ಜನಾಭಿಮತದಮುಖೇನ ನಿರ್ಧರಿಸಬೇಕೆ?

ಅರುಣ್‌ಜೇಟ್ಲಿ
ವಿರೋಧ ಪಕ್ಷದ ನಾಯಕರು(ರಾಜ್ಯ ಸಭಾ)

ಕಾಶ್ಮೀರದಲ್ಲಿ ಸೇನಾ ನಿಯೋಜನೆ ತೆರವುಗೊಳಿಸುವ ವಿಚಾರವನ್ನುಕಣಿವೆಯಜನರಅಭಿಮತ ಪಡೆಯುವ ಮೂಲಕ ನಿರ್ಧರಿಸಬೇಕು ಎಂಬ ಸಲಹೆಯನ್ನುಆಮ್‌ಆದ್ಮಿ ಪಾರ್ಟಿಯ ಹಿರಿಯ ನಾಯಕರೊಬ್ಬರು ನೀಡಿದ್ದಾರೆ.ಜಮ್ಮು ಕಾಶ್ಮೀರದ ಜನರು ಭಾರತದ ಭಾಗವಾಗಿ ಮುಂದುವರಿಯಲುಇಚ್ಛಿಸುವರೆಇಲ್ಲವೇ ಎಂಬ ನಿರ್ಧಾರವನ್ನು ಬಹುಮತದಆಧಾರದ ಮೇಲೆ ನಿರ್ಧರಿಸುವ ಮುಕ್ತ ಅವಕಾಶ ನೀಡಬೇಕುಎಂತಲೂ ಈ ನಾಯಕರುಎರಡು ವರ್ಷಗಳ ಹಿಂದೆ ಸೂಚಿಸಿದ್ದರು.ರಾಜ್ಯಗಳಏಕೀಕರಣದಕಾರ್ಯವನ್ನು ಸರ್ದಾರ್ ಪಟೇಲ್ ನಿರ್ವಹಿಸಿದ್ದರು. ಇದಕ್ಕೆಅಪವಾದದಂತೆಒಂದುಅಂಶವಿದೆ.ಜಮ್ಮು ಕಾಶ್ಮೀರಕ್ಕೆ ಸಂಬಂಧಿಸಿದ ಹಲವಾರು ವಿಚಾರಗಳನ್ನು ಪಂಡಿತ್‌ಜವಹರ್‌ಲಾಲ್ ನೆಹರುಖುದ್ದು ನಿರ್ಧರಿಸುತ್ತಿದ್ದರು.ಜಮ್ಮು ಕಾಶ್ಮೀರಕ್ಕೆ ಸಂಬಂಧಿಸಿದ ವಿಚಾರಗಳ ಅಸಮರ್ಪಕ ನಿರ್ವಹಣೆಯಿಂದಈವರೆಗೂ ನಾವು ಪ್ರತಿಕೂಲ ಪರಿಸ್ಥಿತಿಯನ್ನು ಎದುರಿಸುವಂತಾಗಿದೆ.ಪ್ರತ್ಯೇಕ ಸ್ಥಾನಮಾನದೊಂದಿಗೆ, ಜನಾಭಿಪ್ರಾಯಕ್ಕೆ ಮನ್ನಣೆ ನೀಡುವಆಲೋಚನೆಯನ್ನು ನೆಹರು ಹೊಂದಿದ್ದರು. ಭಾರತದ ಭಾಗವಾಗಿ ಸೇರಿಕೊಂಡಅನ್ಯರಾಜವಂಶಸ್ಥರ ಆಳ್ವಿಕೆಯಿರುವ ಸಂಸ್ಥಾನಗಳ ವಿಚಾರದಲ್ಲಿಅವರು ಈ ಮನೋಧೋರಣೆ ವ್ಯಕ್ತಪಡಿಸಲಿಲ್ಲ. ಜನಾಭಿಮತ ಪಡೆಯುವ ವಿಚಾರವನ್ನುಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಎತ್ತಿದ ಪಾಕಿಸ್ತಾನದ ಪ್ರಯತ್ನಗಳಿಗೆ ಪ್ರತಿಯಾಗಿ ಪಾಕಿಸ್ತಾನ ಭಾರತದ ಭಾಗವನ್ನು ಆಕ್ರಮಿಸಿದೆ ಎಂಬ ಸಂಗತಿಯನ್ನು ಸತತ ಪ್ರಯತ್ನದ ನಂತರ ಮನದಟ್ಟು ಮಾಡಲಾಗಿದೆ. ಇಂದುಅಂತಾರಾಷ್ಟ್ರೀಯ ಸ್ತರದಲ್ಲಾಗಲಿ, ವಿಶ್ವ ಸಂಸ್ಥೆಯ ಪ್ರಕ್ರಿಯೆಯಲ್ಲಾಗಲಿ ಅಥವಾ ಭಾರತ ಪಾಕ್ ದ್ವಿಪಕ್ಷೀಯ ಮಾತುಕತೆಗಳ ಸಂದರ್ಭದಲ್ಲಾಗಲಿ ಜನಾಭಿಪ್ರಾಯದ ವಿಚಾರಗಳ ಪ್ರಸ್ತಾಪ ನಿಂತಿದೆ.

ಭಾರತದರಕ್ಷಣೆ ವಿಚಾರವು ಕೇವಲ ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುವ ವಿಚಾರವಾಗಿದೆ.ರಾಜ್ಯಗಳಿಗೂ, ನಗರಪಾಲಿಕೆಗಳಿಗೂ ಈ ವಿಚಾರಕ್ಕೂ ಸಂಬಂಧವಿಲ್ಲ. ಭಾರತದ ಸಾರ್ವಭೌಮತೆಯನ್ನುಕಾಪಾಡುವ ಹೊಣೆ ಕೇವಲ ಕೇಂದ್ರ ಸರ್ಕಾರದ್ದಾಗಿದೆ.ತನ್ನ ಸಾರ್ವಭೌಮತೆ ಮತ್ತು ಸಮಗ್ರತೆಯನ್ನುರಕ್ಷಿಸುವ ಪ್ರಮುಖವಾದಜವಾಬ್ದಾರಿಯನ್ನುದೇಶ ಹೊಂದಿದೆ. ದೇಶ ವಿಭಜನೆಯ ನಂತರ ಕಾಶ್ಮೀರದ ವಿಚಾರವನ್ನುಜೀವಂತವಾಗಿಡುವ ಸತತ ಪ್ರಯತ್ನವನ್ನು ಪಾಕಿಸ್ತಾನ ಮಾಡುತ್ತಿದೆ.ಕಾಶ್ಮೀರವು ಭಾರತದ ಅವಿಭಾಜ್ಯ ಅಂಗವೆಂಬ ಸಂಗತಿಯನ್ನುಒಪ್ಪಲುಅದು ಸಿದ್ಧವಿಲ್ಲ. ಈ ವಿಚಾರವನ್ನುಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಚುರ ಪಡಿಸುವಅದರ ಪ್ರಯತ್ನಗಳು ವಿಫಲವಾಗಿವೆ. ಕಳೆದ ಎರಡುವರೆ ದಶಕಗಳಲ್ಲಿ ಸಾಂಪ್ರದಾಯಿಕಯುದ್ಧದಲ್ಲಿ ಸೋಲುಂಡಅದುಗಡಿಯಾಚೆಯಿಂದ ಭಯೋತ್ಪಾದನೆಗೆಬೆಂಬಲ ನೀಡುವ ಮೂಲಕ ಭಾರತದ ವಿರುದ್ಧ ಪರೋಕ್ಷಯುದ್ಧ ನಡೆಸಿದೆ.ದಾರಿತಪ್ಪಿದ ಕೆಲವು ಯುವಕರನ್ನು ಒಳಗೊಂಡ ಸ್ಥಳೀಯ ಆತಂಕವಾದಿಗಳ ಸಮೂಹಗಳು ಅವರೊಂದಿಗೆ ಕೈ ಜೋಡಿಸಿವೆ.

'ಮಾನವತೆಯ' ಚೌಕಟ್ಟಿನೊಳಗೆ ಎಲ್ಲಾ ವಿಚಾರಗಳನ್ನು ಪರಿಹರಿಸಿಕೊಳ್ಳಬೇಕು ಎಂಬ ಶ್ರೀ ಅಟಲ್ ಬಿಹಾರಿ ವಾಜಪೇಯಿಯವರಘೋಷಣೆಗೆ ಭಾಜಪ ಬದ್ಧವಾಗಿದೆ.ಈ ತತ್ವವನ್ನು ಆಧರಿಸಿ ಜಮ್ಮು ಹಾಗೂ ಕಾಶ್ಮೀರದ ಜನರಿಗೆ ಶಾಂತಿ, ನೆಮ್ಮದಿ ಹಾಗೂ ಉತ್ತಮಗುಣಮಟ್ಟದಜೀವನಶೈಲಿ ನಡೆಸುವ ಅವಕಾಶ ಕಲ್ಪಿಸಬೇಕು ಮತ್ತು ಭಯೋತ್ಪಾದನೆಯ ನಿರ್ಮೂಲನೆಯಜೊತೆಗೆ ಭಯೋತ್ಪಾದಕ ಸಂಘಟನೆಗಳ ಕಾರ್ಯಾಚರಣೆಕ್ಷಮತೆಯನ್ನು ಮುರಿಯಬೇಕು.ಈ ಉದ್ದೇಶ ಸಾಧನೆ ನಂತರವೇಕಣಿವೆಯನ್ನು ಸೆನಾ ನಿಯಂತ್ರಣದಿಂದ ಮುಕ್ತಗೊಳಿಸಬಹುದು.ಗಡಿ ಭದ್ರತೆ ಹಾಗೂ ಜಮ್ಮು ಮತ್ತು ಕಾಶ್ಮೀರದ ಜನರರಕ್ಷಣೆಗಾಗಿ ಸೇನಾ ಪಡೆ ನಿಯೋಜನೆಅಗತ್ಯವಾಗಿದೆ.

ಕಣಿವೆಯನ್ನು ಸೇನಾ ಪಹರೆಯಿಂದ ಮುಕ್ತಗೊಳಿಸಬೇಕು ಎಂಬ ಸಲಹೆ ಪಾಕಿಸ್ತಾನದ್ದಾಗಿದೆ.ಕೆಲವು ಪ್ರತ್ಯೇಕತಾವಾದಿಗಳು ಈ ಬೇಡಿಕೆಯನ್ನುಇಟ್ಟಿವೆ. ರಾಷ್ಟ್ರೀಯ ಸ್ತರದ ಆಕಾಂಕ್ಷೆಗಳನ್ನು ಹೊಂದಿದಆಮ್ಆದ್ಮಿ ಪಾರ್ಟಿ ಭಾರತದ ಹಿತಾಸಕ್ತಿಗೆ ವಿರುದ್ಧವಾದ ನಿಲವು ಹೊಂದಿರುವುದುದುರಾದೃಷ್ಟಕರವಾಗಿದೆ.ಜನಮನ್ನಣೆ ಪಡೆಯುವ ಮೂಲಕ ಅಥವಾಜನಾಭಿಮತದ ಮೂಲಕವಾಗಲಿ ರಾಷ್ಟ್ರೀಯ ಭದ್ರತೆ ವಿಚಾರಗಳನ್ನು ನಿರ್ಧರಿಸಲಾಗದು. ಭದ್ರತೆದೃಷ್ಟಿಕೋನಒಂದರಿಂದಲೇಅದನ್ನು ನಿರ್ಧರಿಸಲು ಸಾಧ್ಯ.ಜಮ್ಮು ಕಾಶ್ಮೀರದಲ್ಲಿ ಭಯೋತ್ಪಾದಕರು ಸಕ್ರಿಯರಾಗಿರುವವರೆಗು ಸೇನಾ ನಿಯೋಜನೆಆವಶ್ಯಕವಾಗಿದೆ.

ಈ ವಿಚಾರಗಳನ್ನು ಗಮನಿಸಿದರೆ ದೊರೆಯುವತಾತ್ಪರ್ಯವೆಂದರೆ, ಒಂದು ಪರಿಸ್ಥಿತಿಯ ಕುರಿತುಕ್ಷಣಿಕ ಪ್ರತಿಕ್ರಿಯೆ ನೀಡುವರಾಜಕೀಯ ಪಕ್ಷಗಳು ಸ್ಥಿರವಾದ ಸಿದ್ಧಾಂತ ಪಡೆದಿರುವುದಿಲ್ಲ. ಪ್ರಭುದ್ದತೆ ಪಡೆಯುವ ಮೂಲಕವೇ ಅವರ ಸಿದ್ಧಾಂತಗಳು ಬಲಿಯುತ್ತವೆ. ಈ ಮಧ್ಯೆ ಪಕ್ಷದ ಸದಸ್ಯರುಅನುಮಾನಾಸ್ಪದ ಮತ್ತುಗಂಭೀರ ಪರಿಣಾಮ ಬೀರುವ ಹೇಳಿಕೆ ನೀಡುವುದು ಸ್ವಾಭಾವಿಕ. ಹಲವಾರು ವಿಚಾರಗಳಲ್ಲಿ ಆಮ್ಆದ್ಮಿ ಪಕ್ಷದ ನಿಲವು ತಿಳಿದಿಲ್ಲ. ಚುನಾವಣೆಗಳ ನಂತರವಷ್ಟೆಅದರ ನಾಯಕರ ಪ್ರಾರಂಭಿಕ ಸೂಚನೆಗಳ ಮೂಲಕ ತಿಳಿದುಬಂದ ಸಂಗತಿಯೆಂದರೆ ವಿಮಾನನಿಲ್ದಾಣಗಳ ಮತ್ತುರಾಷ್ಟ್ರೀಯ ಸಂಪನ್ಮೂಲಗಳ ರಾಷ್ಟ್ರೀಕರಣದ ಪರವಾದ ನಿಲವು ಅವರದ್ದಾಗಿದೆ, ಭಾರತದ ಭದ್ರತಾ ವಿಚಾರಗಳಲ್ಲಿ ಮೃದುಅಥವಾದುರ್ಬಲ ನಿಲವು ಹೊಂದಿದೆ ಮತ್ತುತೆರಿಗೆ ಪ್ರಮಾಣ ಹೆಚ್ಚಿಸಬಲ್ಲ ವಿನಾಯತಿಗಳ ಪರವಾಗಿದೆ. ಕಳೆದ 10 ದಿವಸಗಳಲ್ಲಿ ಸ್ಥೂಲ ನಿರ್ಣಯಗಳ ಬದಲು, ಅವರಲ್ಲಿ ಸಾಂಕೇತಿಕ ನಿಲವು ಹೆಚ್ಚು ಕಂಡುಬಂದಿದೆ.ಪಕ್ಷದ ಪ್ರಜ್ಞಾವಂತ ಸದಸ್ಯರುಇಂತಹ ಮನೋವೈಕಲ್ಯಗಳನ್ನು ದೂರಮಾಡುವರೆಂಬ ವಿಶ್ವಾಸ ನನ್ನದು.ಇಲ್ಲದಿದ್ದರೆಊರ್ಧ್ವಮುಖವಾಗಿ ಚಲಿಸುವ ವೇಗಕ್ಕಿಂತ ಕೆಳಜಾರುವ ವೇಗ ಹೆಚ್ಚುತ್ತದೆ.

*****